ಹೊಕ್ಕು ಬಳಕೆ ಕಡಿಮೆ, ಹಾಗಾಗಿ ಅವರ ಬಳಿ ಮಾತಾಡಿ ಬರಲು ಹೋಗಿಲ್ಲ' ಎಂದರು ತಂತ್ರಿಗಳು.

ಈ ವಿಷಯ ತಿಳಿದ ಮರುದಿನವೇ ನಂದಕಿಶೋರ ಕೆಮುಂಡೆಲಿಗೆ ಹೋಗಿ ರಾಮರಾಯರ ಮನೆಯ ದಾರಿಯನ್ನು ವಿಚಾರಿಸಿ ತಿಳಿದು ಅವರ ಮನೆಯ ಮೆಟ್ಟಿಲೇರಿದ. ಕೈಯಲ್ಲಿ ಸೇಬು, ಕಿತ್ತಳೆ, ಬಾಳೆಹಣ್ಣುಗಳ ಒಂದು ಚೀಲವನ್ನೂ, ಒಂದು ಕವರಿನಲ್ಲಿ ಹಾಕಿಟ್ಟ ಐದು ಸಾವಿರ ರೂಪಾಯಿಗಳ ಒಂದು ಕಾಣಿಕೆಯನ್ನೂ ಹಿಡಿದುಕೊಂಡಿದ್ದ.

ಹಳೆಯ ದೊಡ್ಡ ಎರಡು ಸೀಳಿನ ಮನೆ ಅವರದು. ಪೂರ್ವದಿಕ್ಕಿನಲ್ಲಿ ಒಂದು ಚಾವಡಿ ಮತ್ತು ಅಂತರ; ಎದುರಿಗೆ ಸಿಮೆಂಟು ಹಾಕಿದ ಅಂಗಳ, ಅಂಗಳಕ್ಕೆ ಸಿಮೆಂಟು ಶೀಟಿನ ಚಪ್ಪರ, ಪೂರ್ವ ದಿಕ್ಕಿನಲ್ಲಿ ವಿಶಾಲವಾದ ಬಾಕಿಮಾರು ಗದ್ದೆ. ಒಂದು ಕಾಲದಲ್ಲಿ ಅನುಕೂಲವಂತರ ಮನೆ ಎಂದೂ, ಸದ್ಯ ಮನೆಯವರ ಪರಿಸ್ಥಿತಿ ಅಷ್ಟಕ್ಕಷ್ಟೆ ಎಂದೂ ಏಕಕಾಲದಲ್ಲಿ ಅರ್ಥವಾಗುವಂತೆ ಮನೆಯ ಸ್ಥಿತಿಯಿತ್ತು. ಎಪ್ಪತ್ತು – ಎಪ್ಪತ್ತೈದು ವರ್ಷದ ರಾಮರಾಯರು ಚಾವಡಿಯಲ್ಲಿದ್ದ ಮರದ ಮಂಚದಲ್ಲಿ ಮಲಗಿಕೊಂಡಿದ್ದರು. ಒಂದು ಹಳೆಯ ದೊಡ್ಡ ಗಾತ್ರದ ಫ್ಯಾನ್ ಗರಾಗರಾ ಸದ್ದು ಮಾಡುತ್ತಾ ತಿರುಗುತ್ತಿತ್ತು.

ನಂದಕಿಶೋರ ಬಂದಾಗ ಅಂಗಳದ ತುದಿಯಲ್ಲಿ ಕಟ್ಟುಹಾಕಿದ್ದ ನಾಯಿ ಬೊಗಳಿದ ಕಾರಣ ರಾಮಚಂದ್ರ ರಾಯರು ಎದ್ದು ಕುಳಿತರು. ಮನೆಯ ಒಳಗಿನಿಂದ ಅವರ ಮಗ ರಾಜಗೋಪಾಲ ಹೊರಗೆ ಬಂದ. ರಾಯರ ಪತ್ನಿ ಬಾಗಿಲ ಹಿಂದಿನಿಂದಲೇ ಇಣಕಿ ನೋಡಿದರು.

ನಂದಕಿಶೋರನನ್ನು ಕಂಡು ರಾಮಚಂದ್ರ ರಾಯರು ಬಹಳ ಸಂತೋಷಪಟ್ಟರು. ಮಗನಿಗೂ, ಒಳಗಿದ್ದ ಹೆಂಡತಿಯನ್ನು ಕರೆದು ಅವರಿಗೂ ಅವನನ್ನು ಪರಿಚಯಿಸಿ, 'ನೋಡಿ, ನಮ್ಮ ಹೋಟೆಲಿನಲ್ಲಿದ್ದು ಓದಿದ ಹುಡುಗ, ಈಗ ಕಾಲೇಜು ಪ್ರೊಫೆಸರ್' ಎಂದು ಹೆಮ್ಮೆಯಿಂದ ಹೇಳಿದರು.

ಸ್ವಲ್ಪ ಹೊತ್ತು ಮಾತಾಡಿ ನಂದಕಿಶೋರ, 'ನಾನಿನ್ನು ಹೊರಡುತ್ತೇನೆ ಧನಿ.... ಆಶೀರ್ವಾದ ಮಾಡಿ' ಎಂದು ಕಾಲುಮುಟ್ಟಿ ನಮಸ್ಕಾರ ಮಾಡಿ, ಹಣ್ಣುಹಂಪಲುಗಳನ್ನೂ, ಕಾಣಿಕೆಯ ಕವರನ್ನೂ ಅವರಿಗೆ ಕೊಟ್ಟ. ರಾಮರಾಯರು ಅದನ್ನು ನೋಡಿ, 'ಈ ಕವರ್ ಮೊದಲು ಹಿಂದೆ ತೆಗಿ. ಹಣ್ಣು ತಗೊಳ್ತೇನೆ' ಎಂದರು.

ನಂದಕಿಶೋರ, 'ಇರಲಿ ಧನಿಗಳೇ....' ಎಂದದ್ದಕ್ಕೆ, 'ಏನು ಹುಡುಗಾ.... ನೀನು? ಒಂದು ವಿದ್ಯಾದಾನ ಮಾಡಿದ ಪುಣ್ಯವಾದರೂ ನನಗೆ ಸಿಗಬಾರದು ಅನ್ನುವುದು ನಿನ್ನ ಹಠವಾ!' ಎಂದು ಬೇಸರಿಸಿಕೊಂಡರು. ಕಣ್ಣಲ್ಲಿ ಸ್ವಲ್ಪ ನೀರು ಜಿನುಗಿದಂತಾಯಿತು.

ನಂದಕಿಶೋರ ಹಣದ ಕವರನ್ನು ತೆಗೆದು ತನ್ನ ಹೆಗಲ ಚೀಲಕ್ಕೆ ಹಾಕಿಕೊಂಡ. ನಂತರ ಅವರ ಮನೆಯಿಂದ ಹೊರಟು ಗದ್ದೆ ಹುಣಿಯಲ್ಲಿ ನಡೆದು, ಹಾಡಿಯ ದಾರಿ ಹಿಡಿದ. ರಾಯರ ಮನೆ ಕಣ್ಣಿಗೆ ಕಾಣದಂತಾಗುವಾಗ ಅವರ ಮಗ ರಾಜ ಹಿಂದಿನಿಂದ ಓಡಿಬಂದ.

'ನಂದಕಿಶೋರ್, ಸ್ವಲ್ಪ ನಿಲ್ಲಿ...' ಎಂದು ಕರೆದು ನಂದಕಿಶೋರನನ್ನು ನಿಲ್ಲಿಸಿದ.

'ನೋಡಿ, ನಮ್ಮ ತಂದೆಗೆ ಬುದ್ಧಿ ಸ್ಥಿಮಿತದಲ್ಲಿಲ್ಲ. ನಿಜವಾಗಿ ನಮಗೆ ಈಗ ಹಣದ ಅಗತ್ಯ ಇದೆ. ನೀವು ಕಷ್ಟಕಾಲದಲ್ಲಿ ತಂದುಕೊಟ್ಟ ಹಣವನ್ನು ತೆಗೆದುಕೊಳ್ಳಲು ಅವರಿಗೆ ದಾಕ್ಷಿಣ್ಯವಾಯಿತು. ದಯವಿಟ್ಟು ಆ ಹಣವನ್ನು ಇಲ್ಲಿ ಕೊಡಿ. ಅಪ್ಪನ ಮದ್ದಿಗಾಗುತ್ತದೆ. ನಿಮ್ಮ ಋಣ ಸ್ವಲ್ಪವಾದರೂ ತೀರಿದ ಹಾಗಾಗುತ್ತದೆ' ಎಂದ.

ನಂದಕಿಶೋರನಿಗೆ ಕಸಿವಿಸಿ ಆಯಿತು. ಆದರೆ ಯಜಮಾನರ ಮಗ ಸಂಕೋಚ ಬಿಟ್ಟು ಕೇಳುತ್ತಿದ್ದಾನೆ, ಹಣ ಕೊಡುವುದು ತನ್ನ ಧರ್ಮ ಎಂದು ತೀರ್ಮಾನಿಸಿ, ಚೀಲದಿಂದ ಐದು ಸಾವಿರ ರೂಪಾಯಿಗಳಿರಿಸಿದ್ದ ಕವರನ್ನು ತೆಗೆದು ರಾಜನ ಕೈಯಲ್ಲಿಟ್ಟ.

'ಥ್ಯಾಂಕ್ಸ್ ನಂದಕಿಶೋರ್ ಅವರೇ' ಎಂದು ಹೇಳಿ ರಾಜಗೋಪಾಲ ಬಂದಷ್ಟೇ ವೇಗವಾಗಿ ಹಿಂದಕ್ಕೆ ಹೋದ.

ಹದಿನೈದು ದಿನಗಳ ನಂತರ ಒಮ್ಮೆ ನಂದಕಿಶೋರ ಉಡುಪಿಯ ರಥಬೀದಿಯಲ್ಲಿ ತರಕಾರಿ ತೆಗೆದು ಕೊಳ್ಳುತ್ತಿದ್ದಾಗ ರಾಜ ಹಿಂದಿನಿಂದ ಬಂದು ಅವನ ಹೆಗಲ ಮೇಲೆ ಕೈಯಿಟ್ಟ.

'ಓ ನಂದಕಿಶೋರ್.... ನೀವು ಸಿಕ್ಕಿದ್ದು ಒಳ್ಳೆಯದಾಯಿತು. ಬನ್ನಿ ಕಾಫಿ ಕುಡಿಯುವ' ಎಂದು ಮಿತ್ರವಿಹಾರ ಹೋಟೆಲಿಗೆ ಕರೆದೊಯ್ದ. ಇಬ್ಬರೂ ಕಾಫಿ ಕುಡಿಯುತ್ತಿದ್ದಂತೆ ರಾಜ ಹೇಳಿದ, 'ನೋಡಿ